ಮೂಡಿಗೆರೆಯಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜಿನ ಪ್ರಾಂಶುಪಾಲರ ಹುದ್ದೆಗಳ ಬಗ್ಗೆ.

(113) - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ವಿಧಾನ ಸಭಾ ಕ್ಷೇತ್ರದೊಳಗೆ ಬರುವ ಕಳಸ, ಬಣಕಲ್, ಆಲ್ದೂರು ಮೂಡಿಗೆರೆಗಳಲ್ಲಿನ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರಾಂಶುಪಾಲರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ;

ಇ) ಇವುಗಳನ್ನು ಇನ್ನೂ ಭರ್ತಿ ಮಾಡಿದಿರಲು ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಬಂದಿದೆ.

ಆ)

1. ಮೂಡಿಗೆರೆ	-28-5-90 ರಿಂದ
2. ಕಳಸ	-7-12-88
3. ಬಣಕಲ್	-7-10-87
5. ಆಲ್ದೂರು	-4-7-88.

ಇ) ಮೇಲಿನ ಹುದ್ದೆಗಳನ್ನು ದಿನಾಂಕ: 14-1-1991ರಂದು ಭರ್ತಿ ಮಾಡಲಾಗಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆ ಬಗ್ಗೆ.

(114) - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೂಡಿಗೆರೆ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಕಟ್ಟಿದ ಶಾಲಾ ಕಟ್ಟಡಗಳೆಷ್ಟು?

2) ಈ ಕಟ್ಟಡಗಳೆಲ್ಲಾ ಈಗ ಶಾಲೆ ನಡೆಯುತ್ತಿದೆಯೇ?

3) ಹಾಗಿದ್ದಲ್ಲಿ ಚಂದ್ರಪುರ ಹಾಗೂ ಲೋಕವಳ್ಳಿಯಲ್ಲಿ ಕಟ್ಟಿದ ಕಟ್ಟಡಗಳಲ್ಲಿ ಶಾಲೆ ನಡೆಸದೇ ಇರಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

1) 102.

2) 100 ಶಾಲಾ ಕೊಠಡಿಗಳಲ್ಲಿ ಶಾಲೆಗಳನ್ನು ನಡೆಸಲಾಗುತ್ತಿದೆ.

3) ಹಾಲಿ ಈ ಊರುಗಳಲ್ಲಿ ಕಟ್ಟಲಾಗಿರುವ ಶಾಲಾ ಕಟ್ಟಡಗಳಲ್ಲಿ, ಕಟ್ಟಡವು ದೂರು ಎಂಬ ಕಾರಣದಿಂದ, ಶಾಲೆಗಳನ್ನು ನಡೆಸಲಾಗುತ್ತಿಲ್ಲ. ಶೀಘ್ರವೇ ಇಲ್ಲಿ ಶಾಲೆಗಳನ್ನು ನಡೆಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.